# ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:10-09-2015ರ ನಡವಳಿಗಳು

## ವಿಷಯದ ಸಂಖ್ಯೆ : 194 / 2015-16

ವಿಷಯ: **Construction of RCC U shape drain at damaged portion of SWD all Ghare Bhavi palya in Ward No.190 Mangammana palya of Bommanahalli zone.**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಬೊಮ್ಮನಹಳ್ಳಿ ವಲಯದ ಮಂಗಮ್ಮನಪಾಳ್ಯದ ಗಾರ್ವೆಬಾವಿಪಾಳ್ಯ ಬಡಾವಣೆಯ ವಾರ್ಡ್ ನಂ.190 ರಲ್ಲಿ ರಾಜಕಾಲುವೆ ಇದ್ದು, ಇದು ಗಾರ್ವೆಬಾವಿಪಾಳ್ಯ ಮತ್ತು ಇತರೆ ಬಡಾವಣೆಗಳಿಂದ ಮಳೆಯ ನೀರನ್ನು, ಗಾರ್ವೆಬಾವಿ ಕೆರೆಗೆ ಸೇರಿಸುವ ಪಿಳ್ಳುಗಾಲುವೆಯಾಗಿರುತ್ತದೆ. ಈ ಪಿಳ್ಳುಗಾಲುವೆಯು ಕಚ್ಚಾ ಸ್ಥಿತಿಯಲ್ಲಿದ್ದು, ಹೂಳಿಂದ ತುಂಬಿರುತ್ತದೆ. ಕೆಲವೊಂದು ಕಡೆ ಕಾಲುವೆಯು ಇರುವುದಿಲ್ಲ ಹಾಗೂ ಕೆಲವೊಂದು ಕಡೆ ಖಾಸಗಿಯವರು ಕಾಲುವೆಯನ್ನು ಒತ್ತುವರಿ ಮಾಡಿಕೊಂಡಿರುತ್ತರೆ. ಇದರಿಂದ ಮಳೆಗಾಲದಲ್ಲಿ ಮಳೆ ನೀರಿನ ಹರಿವಿಗೆ ಅಡಚಣೆಯಾಗಿ ಪ್ರವಾಹದಿಂದ ಜನರ ಆಸ್ತಿಪಾಸ್ತಿಗೆ ಹಾನಿಯಾಗಿರುತ್ತದೆ. ಆದುದರಿಂದ ಒಂದು ಶಾಶ್ವತವಾದ ಮಳೆ ನೀರು ಕಾಲುವೆಯನ್ನು ನಿರ್ಮಾಣ ಮಾಡುವುದರಿಂದ ಮುಂದಿನ ಹಾನಿಯನ್ನು ತಡೆಗಟ್ಟಬಹುದು. ಪ್ರಸಕ್ತ ವರ್ಷದ ಮಳೆಗಾಲದಲ್ಲಿ ಬಿದ್ದ ಮಳೆಯಿಂದ ಪ್ರವಾಹ ಉಂಟಾಗಿ ಈ ಕಾಲುವೆಯ ಸುತ್ತಮುತ್ತಲಿನ ತಗ್ಗು ಪ್ರದೇಶದ ಮನೆಗಳಿಗೆ ಮಳೆ ನೀರು ನುಗ್ಗಿ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುತ್ತದೆ. ಇದರಿಂದ ಲೇಔಟ್‌ನ ಜನರಿಗೆ ತುಂಬಾ ತೊಂದರೆಯಾಗಿರುತ್ತದೆ. ಪ್ರತಿ ವರ್ಷವೂ ಇದೇ ರೀತಿ ಮಳೆ ಬಿದ್ದಾಗಲೂ ಸಹ ಪ್ರವಾಹ ಉಂಟಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುತ್ತದೆ. ಈ ವಿಚಾರವನ್ನು ಸ್ಥಳೀಯ ಸಾರ್ವಜನಿಕರು ತೊಂದರೆಯ ಬಗ್ಗೆ ತಿಳಿಸಿದ ಪ್ರಯುಕ್ತ ಕಾಮಗಾರಿಯ ಅವಶ್ಯಕತೆ ಇರುವುದರಿಂದ ಗಾರ್ವೆಬಾವಿ ಪಾಳ್ಯ ಬಡಾವಣೆಯಿಂದ ಗಾರ್ವೆಬಾವಿ ಕೆರೆಗೆ ಸೇರುವ ಮಳೆ ನೀರು ಕಾಲುವೆಯು ಮಾದರಿಯ ಆರ್‌ಸಿಸಿ ಕಾಲುವೆಯನ್ನು ನಿರ್ಮಿಸಲು ರೂ.86.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಬೆಂಗಳೂರು ವೃತ್ತದ ದರಪಟ್ಟಿ 2014-15 ದರಗಳ ಅನ್ವಯ ತಯಾರಿಸಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ. ಈ ಕಾಮಗಾರಿಯಿಂದ ಮಳೆ ನೀರು ಕಾಲುವೆಯಲ್ಲಿ ಮಳೆ ನೀರು ಸರಾಗವಾಗಿ ಹರಿದು ಪ್ರಸ್ತುತ ಪ್ರದೇಶಗಳಲ್ಲಿಯ ಪ್ರವಾಹವನ್ನು ತಡೆಗಟ್ಟುವುದಲ್ಲದೆ ಸಾರ್ವಜನಿಕರ ಆಸ್ತಿಪಾಸ್ತಿಯನ್ನು ರಕ್ಷಿಸಿದಂತಾಗುತ್ತದೆ.

ಸದರಿ ಕಾಮಗಾರಿಗೆ ದಿನಾಂಕ:21-10-2014 ರಂದು ಮೊದಲನೇ ಬಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಡಿಯಲ್ಲಿ ಎರಡು ಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ:06-11-2014 ಆಗಿದ್ದು, ಒಬ್ಬ ಗುತ್ತಿಗೆದಾರರು ಮಾತ್ರ ಭಾಗವಹಿಸಿರುತ್ತಾರೆ. ಆದ್ದರಿಂದ ಎರಡನೇ ಸಾರಿ ದಿನಾಂಕ:11-11-2014 ರಂದು ಟೆಂಡರ್ ಕರೆಯಲಾಯಿತು. ಈ ಟೆಂಡರ್‌ನಲ್ಲಿಯೂ ಒಬ್ಬರೇ ಗುತ್ತಿಗೆದಾರು ಭಾಗವಹಿಸಿರುತ್ತಾರೆ. ಪುನಃ ಮೂರನೇ ಸಾರಿ ದಿನಾಂಕ:03-11-2014 ರಂದು ಟೆಂಡರ್ ಕರೆಯಲಾಯಿತು. ಇದಕ್ಕೂ ಒಬ್ಬರೇ ಗುತ್ತಿಗೆದಾರರಾದ ಶ್ರೀ. ವೀರವಾಸು ಎಂಬುವವರು ಮಾತ್ರ ಭಾಗವಹಿಸಿರುತ್ತಾರೆ. ಅವರು ಬಹಳ ಹೆಚ್ಚುವರಿಯಾಗಿ ದರವನ್ನು ನಮೂದಿಸಿರುವುದರಿಂದ ಗುತ್ತಿಗೆದಾರರಿಂದ ಸಂಧಾನದ ದರ ಪಡೆಯಲಾಯಿತು. ಉಳಿದ ವಿವರಗಳನ್ನು ಕೆಳಕಂಡಂತಿವೆ.

..............................2

| | | |
|---|---|---|
| 1. | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2014-15ನೇ ಸಾಲಿನ ದರಪಟ್ಟಿಯಂತೆ) | ರೂ.85,74,837.41 |
| 2 | ಬಿಡ್ಡುದಾರರಾದ ಶ್ರೀ. ವೀರವಾಸು ರವರು ನಮೂದಿಸಿದ ಟೆಂಡರ್ ಮೊತ್ತ | ರೂ.96,45,484.20 |
| 2. | ಬಿಡ್ಡುದಾರರಾದ ಶ್ರೀ ವೀರವಾಸು ರವರು ಸಂಧಾನದಂತೆ ನಮೂದಿಸಿದ ಟೆಂಡರ್ ಮೊತ್ತ | ರೂ.95,99,903.60 |
| 3. | 2014-15ನೇ ಸಾಲಿನ ದರಪಟ್ಟಿಯ (ಅಂದಾಜುಪಟ್ಟಿಯ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ | **ಶೇ.11.95% ಹೆಚ್ಚಿನ ದರ** |

ಶ್ರೀ. ವೀರವಾಸು ರವರು ಸಂಧಾನದಂತೆ ನಮೂದಿಸಿರುವ ಮೊತ್ತ ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ (2014-15ನೇ ಸಾಲಿನ ದರಪಟ್ಟಿಯಂತೆ) ಹೋಲಿಸಿದಾಗ ಶೇ.11.95 ರಷ್ಟು ಹೆಚ್ಚಿಗೆ ದರ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ವೀರವಾಸು ರವರು ಸಂಧಾನದಂತೆ ನಮೂದಿಸಿರುವ ಟೆಂಡರ್ ಮೊತ್ತ ರೂ.95,99,903.60 ಗಳನ್ನು ಪ್ರಸಕ್ತ ಸಾಲಿನ ಹಾಗೂ ಅಂದಾಜು ಪಟ್ಟಿಯಂತೆ 2014-15ರ ದರಪಟ್ಟಿಗೆ ಹೋಲಿಸಿದಾಗ 11.95% ಹೆಚ್ಚಿಗೆ ದರಕ್ಕೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08-09-2015ರ ಟಿಪ್ಪಣಿ.

<u>ತೀರ್ಮಾನ</u>: **"ಶೇ.9.99% ರಷ್ಟು ಹೆಚ್ಚಿನ ದರಕ್ಕೆ ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:10-09-2015ರ ನಡವಳಿಗಳು

**ವಿಷಯದ ಸಂಖ್ಯೆ : 195 / 2015-16**

ವಿಷಯ: **ಜಾಹೀರಾತು ಬೈಲಾ ತಿದ್ದುಪಡಿ-2012ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಗಾರರ ತೀರ್ಮಾನಕ್ಕೆ ಅನುಮೋದನೆ ನೀಡುವ ಕುರಿತು.**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಾಹೀರಾತು ಬೈಲಾ-2006ರ ತಿದ್ದುಪಡಿ-2012ಕ್ಕೆ ಮಾನ್ಯ ಆಡಳಿತಗಾರರ ವಿಷಯ ಸಂಖ್ಯೆ:102/2015-16, ದಿನಾಂಕ: 20-06-2015 ರಂತೆ ತೆಗೆದುಕೊಂಡಿರುವ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ಕೋರಲಾಗಿ, ದಿನಾಂಕ:16-07-2015 ರಂದು ಸರ್ಕಾರವು ಅನುಮೋದನೆ ನೀಡಿರುತ್ತದೆ.

ಈ ಸಂಬಂಧ ಜಾಹೀರಾತು ಬೈಲಾ-2006ಕ್ಕೆ ಮಾಡಿರುವ ತಿದ್ದುಪಡಿ-2012 ಅನ್ನು ಹಾಗೂ ಜಾಹೀರಾತು ತೆರಿಗೆ ದರಗಳನ್ನು ಅತೀ ಮುಖ್ಯ ರಸ್ತೆಗಳಿಗೆ ಚದರ ಮೀಟರ್‌ಗೆ ರೂ.260/- ಗಳಂತೆ ಹಾಗೂ ಉಳಿದ ರಸ್ತೆಗಳಿಗೆ ಚದರ ರೂ.200/- ಗಳಂತೆ ನಿಗಧಿಪಡಿಸಲು ಸರ್ಕಾರವು ಅನುಮೋದನೆ ನೀಡಿರುವ ಮೇರೆಗೆ ಸದರಿ ನಡವಳಿಯನ್ನು ಪಾಲಿಕೆ ಸಭೆಯಲ್ಲಿ ದಾಖಲಿಸಿ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08-09-2015ರ ಟಿಪ್ಪಣಿ.

**ತೀರ್ಮಾನ: "ಒಪ್ಪಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು